ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 2.5.2024 ರಂದು ಪಾಲಿಕೆಯ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ 2022–23ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಪತ್ರದ ಸಂಖ್ಯೆ: ನ.ಆ.ಇ 358 ಎಂ.ಎನ್.ವೈ 2023(ಇ) ಬೆಂಗಳೂರು ದಿನಾಂಕ: 11–12–2023 ರಂತೆ ಬಿಡುಗಡೆಯಾಗಿರುವ ರೂ. 291.00 ಕೋಟಿಗಳ ಕ್ರೀಯಾ ಯೋಜನೆಯಡಿಯಲ್ಲಿ ನೀರು ಸರಬರಾಜು ಭಾಗ–ಬಿ– ನೀರು ಸರಬರಾಜು ಕ್ರಮ ಸಂಖ್ಯೆ 02 ರಲ್ಲಿ Supply of Drinking water to Public in BBMP during summer – 2024 ಗಾಗಿ ರೂ.20.00 ಕೋಟಿಗಳ ಅನುದಾನದಡಿಯಲ್ಲಿ ಮೈಕ್ರೋ ಲೆವೆಲ್ ಆಕ್ಷನ್ ಪ್ಲಾನ್ ನಲ್ಲಿ ಮಂಜೂರಾಗಿರುವ ಕಾಮಗಾರಿಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ನಂ–01 ಮತ್ತು 03ರಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳಲು ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ/ಆರ್ಥಿಕ ಮೌಲ್ಯಮಾಪನಕ್ಕೆ ಅನುಮೋದನೆ ನೀಡುವ ಬಗ್ಗೆ ರಚಿಸಲಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಆಯುಕ್ತರು : ಅಧ್ಯಕ್ಷರು
2. ವಿಶೇಷ ಆಯುಕ್ತರು (ಯೋಜನೆ) : ಉಪಾಧ್ಯಕ್ಷರು
3. ವಿಶೇಷ ಆಯುಕ್ತರು(ಘತ್ಯಾನಿ) : ಸದಸ್ಯರು
4. ವಿಶೇಷ ಆಯುಕ್ತರು(ಹಣಕಾಸು) : ಸದಸ್ಯರು
5. ಪ್ರಧಾನ ಅಭಿಯಂತರರು : ಸದಸ್ಯರು
6. ಮುಖ್ಯ ಲೆಕ್ಕಾದಿಕಾರಿಗಳು : ಸದಸ್ಯರು
7. ಮುಖ್ಯ ಅಭಿಯಂತರರು(ಯಲಹಂಕ ವಲಯ) : ಸದಸ್ಯ ಕಾರ್ಯದರ್ಶಿ

ವಿಷಯ ಸಂಖ್ಯೆ:

Name of work: Drilling of borewells and providing pipeline and supply of drinking water to public in Harohalli, Nagenahalli, Kenchenahalli, Doddabettahalli, Chikkabettahalli, and Ananthapura village areas in ward No-01 and Ward No-03 of yelahanka Division.

ಕ್ರ. ಸಂ	ಸಂಕ್ಷಿಪ್ತ ವಿವರ		ದಿನಾಂಕ
1	ಅಂದಾಜು ಮೊತ್ತ	ರೂ. 300.00 ಲಕ್ಷಗಳು	
2	ದರಪಟ್ಟಿ ಅಳವಡಿಕೆ	2023–24ನೇ ಸಾಲಿನ ಲೋಕೋಪಯೋಗಿ ಇಲಾಖೆ	
3	ಲೆಕ್ಕಶೀರ್ಷಿಕೆ	"2022–23ನೇ ಸಾಲಿನ 15ನೇ ಹಣಕಾಸು ಯೋಜನೆ ನೀರು ಸರಬರಾಜು ಭಾಗ–ಬಿ ಕ್ರಮಸಂಖ್ಯೆ–02"	

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4	ಆಡಳಿತಾತ್ಮಕ ಮಂಜೂರಾತಿ	ಸಕ್ಷಮ ಪ್ರಾಧಿಕಾರದಿಂದ ನಿರೀಕ್ಷಿಸಲಾಗಿದೆ	
5	ತಾಂತ್ರಿಕ ಮಂಜೂರಾತಿ	ಸಂಖ್ಯೆ ಬೃ.ಬೆಂ.ಮ.ಪಾ/ಮು.ಅ/ತಾ.ಮಂ/ಯ.ವ./ ಪಿ.ಆರ್ /86/2023-24	07-02-2024
6	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಿಯಂತರರು ಯಲಹಂಕ ವಲಯ	
7	ಟೆಂಡರ್‌ಗೆ ಇಟ್ಟ ಮೊತ್ತ	ರೂ.255.43 ಲಕ್ಷಗಳು	
8	ಟೆಂಡರ್ ಪ್ರಕಟಣೆ ಸಂಖ್ಯೆ	BBMP/EE/YNK.D/ KPPP/ 11/2023-24	
9	ದಿನಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯ ಕರ್ನಾಟಕ ಮತ್ತು ಟೈಮ್ಸ್ ಆಫ್ ಇಂಡಿಯಾ ದಿನ ಪತ್ರಿಕೆಯ ಪ್ರಕಟಗೊಂಡಿದೆ.	07-02-2024.
10	ಟೆಂಡರ್ ಸಲ್ಲಿಕೆಯ ಅಂತಿಮ ದಿನಾಂಕ	19-02-2024.	08-02-2024.
11	ಟೆಂಡರ್ ಪದ್ಧತಿ	ದ್ವಿ ಲಕೋಟೆ ಪದ್ಧತಿ	
12	ಉಪಯೋಗಿಸಿದ Standard Bid document	Standard document KW-4	
13	E-Procurement Indent No.	BBMP/2023-24/OW/Work_INDENT _2173	

2022-23ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಸರ್ಕಾರದ ಆದೇಶ ಪತ್ರದ ಸಂಖ್ಯೆ: ನ.ಆ.ಇ 358 ಎಂ.ಎನ್.ವೈ 2023(ಇ) ಬೆಂಗಳೂರು ದಿನಾಂಕ: 11-12-2023 ರಂತೆ ಬಿಡುಗಡೆಯಾಗಿರುವ ರೂ. 291.00 ಕೋಟಿಗಳ ಕ್ರೀಯಾ ಯೋಜನೆಯಡಿಯಲ್ಲಿ ನೀರು ಸರಬರಾಜು ಭಾಗ-ಬಿ ಕ್ರ. ಸಂಖ್ಯೆ 2ರಲ್ಲಿ ಕೊಳವೆ ಭಾವಿಗಳಿಗೆ ಮೀಸಲಿಟ್ಟಿರುವ ರೂ.20.00 ಕೋಟಿಗಳ ಅನುದಾನದಡಿಯಲ್ಲಿ ಮೈಕ್ರೋ ಲೆವೆಲ್ ಆಕ್ಷನ್ ಪ್ಲಾನ್ ನಲ್ಲಿ ಮಂಜೂರಾಗಿರುವ ಕಾಮಗಾರಿಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ನಂ-01 ಮತ್ತು 03ರಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ದಿನಾಂಕ:03-02-2024 ರಂದು ದ್ವಿ-ಲಕೋಟೆ KPPP ರಡಿಯಲ್ಲಿ ರೂ.300.00ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಬಿಡ್‌ದಾರರು ಭಾಗವಹಿಸಿದ್ದು ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2023-24 ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆದಾರರು ನಮೂದಿಸಿರುವ ದರಗಳು	2023-24 ನೇ ಸಾಲಿನ ಎಸ್.ಆರ್‌ಧರಗಳಿಗೆ ಹೋಲಿಸಿದಾಗ ಶೇಕಡವಾರು	ಷರಾ
01	B P Mahesh (M/s Sri Sai Manjunatha Enterprises)	2,55,43,712.89	2,67,95,426.35	(+)4.90%	L-1
02	K R Santhosh kumar		2,70,76,303.87	(+)6.07%	L-2

ಮುಖ್ಯ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ Sri. B P Mahesh (M/s Sri Sai Manjunath Enterprises) ರವರು **ರೂ.2,67,95,426.35** ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2023–24ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ **ಶೇ(+)4.90%** ರಷ್ಟು ಹೆಚ್ಚಾಗಿರುತ್ತದೆ. ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಅನುಮೋದನೆ ಕೋರಿ ಆರ್ಥಿಕ ಮೌಲ್ಯ ಮಾಪನ ಸಮಿತಿ ಮುಂದೆ ಮಂಡಿಸಲಾಗಿದ್ದು, ಅದರಂತೆ ದಿನಾಂಕ: 1–3–2024 ರಂದು ಮಾನ್ಯ ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಮೌಲ್ಯ ಮಾಪನ / ಆರ್ಥಿಕ ಮೌಲ್ಯ ಮಾಪನ ಮತ್ತು ಧರ ಸಂದಾನ ಸಮಿತಿಯಲ್ಲಿ ಚರ್ಚಿಸಿದಂತೆ 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಅನ್ನು ಎಸ್.ಆರ್. ದರಗಳಿಗೆ ಮಿತಿಗೊಳಿಸುವಂತೆ ಸೂಚಿಸಿದ್ದು, ಅದರಂತೆ ಗುತ್ತಿಗೆದಾರರಾದ Sri. B P Mahesh (M/s Sri Sai Manjunath Enterprises) ರವರಿಗೆ ತಿಳಿಸಲಾಗಿದ್ದು, ಸದರಿಯವರು ಎಸ್.ಆರ್. ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿ ದಿನಾಂಕ: 1–3–2024 ರಂದು ಈ ಕಛೇರಿಗೆ ಪತ್ರ ನೀಡಿರುತ್ತಾರೆ.

ಗುತ್ತಿಗೆದಾರರೊಂದಿಗೆ ದರ ಸಂಧಾನದ ನಡೆಸಿರುವಂತೆ ವಿವರಗಳು ಈ ಕೆಳಕಂಡಂತಿದೆ.

Sl No	Before Negotiation		After Negotiation	
	ಗುತ್ತಿಗೆದಾರರು ನಮೂದಿಸಿರುವ ದರಗಳು	2023–24ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	2023–24ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡವಾರು
01	**2,67,95,426.35**	**(+)4.90%**	**2,55,43,712.89**	ಎಸ್.ಆರ್.ದರಗಳು

ಈ ಮೇಲ್ಕಂಡ ವಿವರಗಳಂತೆ ದರಸಂದಾನದ ನಂತರ ಗುತ್ತಿಗೆದಾರರಾದ Sri. B P Mahesh (M/s Sri Sai Manjunath Enterprises) ರವರು ರೂ. **2,55,43,712.89** ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2023–24ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ ಎಸ್.ಆರ್.ದರಗಳಾಗಿರುತ್ತವೆ. ಗುತ್ತಿಗೆದಾರರ **Bid Capacity** ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಿರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ಪರಿಶೀಲಿಸಿ ದೃಡೀಕರಿಸಿದ್ದು ಹಾಗೂ ಯಲಹಂಕ ವಿಭಾಗಕ್ಕೆ ಮಂಜೂರಾಗಿರುವ ಕ್ರಿಯಾಯೋಜನೆಯಲ್ಲಿ ಒಟ್ಟು 300.00 ಲಕ್ಷಗಳು ಮಾತ್ರ ಅನುದಾನ ಮಂಜೂರಾಗಿದ್ದರಿಂದ ಪ್ಯಾಕೇಜ್ ಮಾಡಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೀರ್ಮಾನ:

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ Sri. B P Mahesh (M/s Sri Sai Manjunath Enterprises) ರವರು **ರೂ.2,67,95,426.35** ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2023-24ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ **ಶೇ(+)4.90%** ರಷ್ಟು ಹೆಚ್ಚಾಗಿರುತ್ತದೆ. ಗುತ್ತಿಗೆದಾರರ ದರ ಸಂಧಾನದ ನಂತರ **ರೂ2,55,43,712.89** ಗಳಾಗಿದ್ದು, ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2023-24ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ **ಎಸ್.ಆರ್.ದರಗಳಾಗಿರುತ್ತವೆ.** ಸದರಿ ದರಗಳಿಗೆ ಟೆಂಡರ್ ಅನುಮೋದನೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು
ಯಲಹಂಕ ವಲಯ

ಪ್ರಧಾನ ಅಭಿಯಂತರರು
ಬಿಬಿಎಂಪಿ

ಮುಖ್ಯ ಲೆಕ್ಕಾಧಿಕಾರಿಗಳು
ಬಿಬಿಎಂಪಿ

ವಿಶೇಷ ಆಯುಕ್ತರು (ಪೌರಕಾರ್ಮಿಕರು)
ಬಿಬಿಎಂಪಿ

ವಿಶೇಷ ಆಯುಕ್ತರು (ಹಣಕಾಸು)
ಬಿಬಿಎಂಪಿ

ವಿಶೇಷ ಆಯುಕ್ತರು (ಯೋಜನೆ)
ಬಿಬಿಎಂಪಿ

ಮುಖ್ಯ ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ ಮೌಲ್ಯಮಾಪನ
/ಆರ್ಥಿಕ ಮೌಲ್ಯ ಮಾಪನ ಮತ್ತು ದರಸಂಧಾನ ಸಮಿತಿ
(ಅಧ್ಯಕ್ಷರು)